# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

("ವಿ ಟಿ ಯು ಅಧಿನಿಯಮ ೧೯೯೪" ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ)

"ಜ್ಞಾನ ಸಂಗಮ", ಬೆಳಗಾವಿ-590018, ಕರ್ನಾಟಕ, ಭಾರತ

# Visvesvaraya Technological University

(State University of Government of Karnataka Established as per the VTU Act, 1994)

"Jnana Sangama" Belagavi-590018, Karnataka

Phone: (0831) 2498100, Fax: (0831) 2405467, Website: vtu.ac.in

ರಾಷ್ಟ್ರೀಯ ಸೇವಾ ಯೋಜನೆ

ಪ್ರೊ. ಎ.ಎಸ್.ದೇಶಪಾಂಡೆ ಬಿ.ಇ., ಎಂ.ಟೆಕ್., ಪಿಹೆಚ್.ಡಿ
ಕುಲಸಚಿವರು

ದೂರವಾಣಿ ಸಂ : 0831-2405468
ಫ್ಯಾಕ್ಸ್ ಸಂ : 0831-2405467


ಸಂ. ವಿತಾವಿ /ಬಿ.ಜಿ.ಎಮ್/ರಾ.ಸೇ.ಯೋ/2022-23/ 625

ದಿನಾಂಕ: 22 JUL 2022

**ಸುತ್ತೋಲೆ**

ವಿಷಯ : ಅಮೃತ ಸ್ವಾತಂತ್ರ್ಯದ ಮಹೋತ್ಸವದ ಹಿನ್ನಲೆಯಲ್ಲಿ ' ಹರ್ ಘರ್ ತಿರಂಗಾ' ಅಭಿಯಾನ ಕಾರ್ಯಕ್ರಮ ಅನುಷ್ಠಾನ ಕುರಿತು.
ಉಲ್ಲೇಖ : ಯುಸೇಇ/ರಾ.ಸೇ.ಯೋ/12/2021/2022-23/186

ಮೇಲಿನ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಪ್ರತಿಯೊಂದು ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ದೇಶಾದ್ಯಂತ ಭಾರತ ಸ್ವಾತಂತ್ರ್ಯದ 75ರ ಸಂಭ್ರಮವನ್ನು ವೈವಿಧ್ಯಮಯವಾಗಿ ಆಚರಿಸುವ ಸಂಭ್ರಮದ ಒಂದು ಭಾಗವಾಗಿ ಕೇಂದ್ರ ಸರ್ಕಾರವು 'ಹರ್ ಘರ್ ತಿರಂಗಾ' ಎಂಬ ಘೋಷವಾಕ್ಯದೊಂದಿಗೆ 2022ರ ಅಗಸ್ಟ 11 ರಿಂದ 17 ರವರೆಗೆ ದೇಶದ ಪ್ರತಿ ಮನೆ –ಮನೆಯಲ್ಲೂ ರಾಷ್ಟ್ರ ಧ್ವಜವನ್ನು ಹಾರಿಸಿ ದೇಶಭಕ್ತಿ ಬಿಂಬಿಸುವ ಮೂಲಕ ನಮ್ಮ ರಾಷ್ಟ್ರ ಪ್ರೇಮವನ್ನು ಅಭಿವ್ಯಕ್ತಗೊಳಿಸಿ ದಾಖಲಿಸುವಂತೆ ಕರೆ ನೀಡಿರುವ ಹಿನ್ನಲೆಯಲ್ಲಿ 'ಹರ್ ಘರ್ ತಿರಂಗಾ' ಅಭಿಯಾನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರದ, ಸರ್ಕಾರಿ/ಅರೆ ಸರ್ಕಾರಿ/ನಿಗಮ /ಮಂಡಳಿಗಳು/ಸಾರ್ವಜನಿಕ ಉದ್ಯಮಗಳು/ ಸ್ವಸಹಾಯಗಳು ಗುಂಪುಗಳು/ ನಾಗರೀಕ ಸಂಸ್ಥೆಗಳು/ ಸಾರ್ವಜನಿಕರು/ ಶಾಲಾ / ಕಾಲೇಜು ಮಕ್ಕಳು/ ಇತರೆ ಎಲ್ಲಾ ಸಿಬ್ಬಂದಿಗಳು ಹಾಗೂ ಅವರ ಕುಟುಂಬ ವರ್ಗದವರನ್ನು ಸೇರಿ ಸ್ವತಃ ತಾವೇ ಕ್ರೀಯಾಶೀಲಾವಾಗಿ ಭಾಗವಹಿಸುವಂತೆ ಪೇರೇಪಿಸಲು ಅಗತ್ಯ ಕ್ರಮವಹಿಸಬೇಕಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮೇಲಿನ ಉಲ್ಲೇಖ ಪತ್ರಗಳ ಪ್ರತಿಗಳ ಲಗತ್ತಿಸುತ್ತಾ ಕೇಂದ್ರ ಸರ್ಕಾರದ ಜಾಲ ತಾಣದಲ್ಲಿ (amritmahotsav.nic.in) 'ಹರ್ ಘರ್ ತಿರಂಗಾ' ದ ಅಡಿಯಲ್ಲಿ ರಾಷ್ಟ್ರ ಧ್ವಜಕ್ಕೆ ಸಂಬಂಧಿಸಿದಂತೆ ಬ್ಯಾನರ್ ಮತ್ತು ಪೋಸ್ಟರ ಗಳ ಮಾದರಿಗಳು ಲಭ್ಯವಿದ್ದು ಅವುಗಳ ಉಪಯೋಗಗಳನ್ನು ಪಡೆದುಕೊಂಡು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾಲೇಜುಗಳ ಕಾರ್ಯಕ್ರಮಾಧಿಕಾರಿಗಳ ಮತ್ತು ಸ್ವಯಂ ಸೇವಕ /ಸೇವಕಿಯರು ಕೂಡಾ ಸದರಿ ಅಭಿಯಾನದಲ್ಲಿ ಭಾಗವಹಿಸಲು ನಿರ್ದೇಶಿಸಲಾಗಿದೆ. 'ಹರ್ ಘರ್ ತಿರಂಗಾ' ಅಭಿಯಾನವನ್ನು ಕಾರ್ಯಕ್ರಮವನ್ನು ಯಶ್ವಸಿಗೊಳಿಸಿ ಮತ್ತು ವರದಿಯನ್ನು ವಿತಾವಿ ರಾ.ಸೇ.ಯೋ. ಕೋಶಕ್ಕೆ ಇ-ಮೇಲ್ ಮೂಲಕ (nss@vtu.ac.in) ಸಲ್ಲಿಸಲು ಕೋರಲಾಗಿದೆ.

ವಂದನೆಗಳೊಂದಿಗೆ.

**ಕುಲಸಚಿವರು**

**ಇವರಿಗೆ,**

ಪ್ರಾಂಶುಪಾಲರು ಮತ್ತು ಕಾರ್ಯಕ್ರಮಾಧಿಕಾರಿಗಳು,
ವಿ.ತಾ.ವಿ ಅಧಿನಕ್ಕೊಳಪಡುವ ಸಂಬಂದಪಟ್ಟ
ಎಲ್ಲಾ ಅಭಿಯಾಂತ್ರಿಕ / ತಾಂತ್ರಿಕ ಮಹಾವಿದ್ಯಾಲಯಗಳು

**ಪ್ರತಿಯನ್ನು ಮಾಹಿತಿಗಾಗಿ :**

1. ಮಾನ್ಯ ಕುಲಪತಿಗಳು, ವಿ.ತಾ.ವಿ., ಬೆಳಗಾವಿ ಇವರಿಗೆ ಕುಲಪತಿಗಳ ಕಾರ್ಯದರ್ಶಿಗಳ ಮುಖಾಂತರ.
2. ರಾಜ್ಯ ಎನ್. ಎಸ್. ಎಸ್. ಅಧಿಕಾರಿಗಳು ರಾ.ಸೇ.ಯೋ. ಕೋಶ, ಯುಸೇಇ, ಬೆಂಗಳೂರು.
3. ವಿಶೇಷಾಧಿಕಾರಿಗಳು., ಸಿ.ಎನ್.ಸಿ. ವಿಭಾಗ, ವಿತಾವಿ., ಇವರಿಗೆ ಸದರಿ ಸುತ್ತೋಲೆಯನ್ನು ವಿ.ತಾ.ವಿ.ಯ ವೆಬ್‌ಸೈಟನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
4. ಕಛೇರಿ ಪ್ರತಿ.